# ಹೊಸ ಶೇಡ್‌ನಲ್ಲಿ ಅಜಯ್ ರಾವ್

■ ಸುಮಲತಾ ಎನ್.

**ಕಂಟೆಂಟ್ ಆಧರಿತ ಸಿನಿಮಾಗಳ ಕಡೆ ಹೆಚ್ಚು ಒಲವು ತೋರುತ್ತಿರುವ ನಟ ಅಜಯ್ ರಾವ್, ವಿಭಿನ್ನ ಶೇಡ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅವರ ನಟನೆಯ ಹಲವು ಸಿನಿಮಾಗಳು ಸರದಿಯಲ್ಲಿದ್ದು, ಆ ಸಿನಿಮಾಗಳ ಕುರಿತು ಅವರು ಮಾತನಾಡಿದ್ದಾರೆ.**



◆ **ಈಚೆಗೆ ಸಿನಿಮಾ ಪೋಸ್ಟರ್‌ವೊಂದರಲ್ಲಿ ಹೊಸ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದೀರಿ. ಪಾತ್ರ ಏನು ಹೇಳಲು ಹೊರಟಿದೆ?**

ಇದು ಫ್ಯಾಮಿಲಿ ಥ್ರಿಲ್ಲರ್, ಹೈವೋಲ್ಟೇಜ್ ಆ್ಯಕ್ಷನ್ ಸಿನಿಮಾ. ನನ್ನ ಪಾತ್ರಕ್ಕೆ ವಿಭಿನ್ನ ಗೆಟಪ್‌ಗಳು, ಶೇಡ್‌ಗಳಿವೆ. 'ಯುದ್ಧಕಾಂಡ 2' ಸಿನಿಮಾ ಮಾಡಿದ ಸಂದರ್ಭ ಸಾಕಷ್ಟು ಕಥೆಗಳು ಬರುತ್ತಿದ್ದವು. ಕಂಟೆಂಟ್ ಆಧರಿತ ಸಿನಿಮಾ ಮಾಡಿದ್ದ ಆ ಸಂದರ್ಭದಲ್ಲಿ ನನ್ನಿಂದ ಜನರು ಏನನ್ನು ನಿರೀಕ್ಷಿಸುತ್ತಾರೆ ಎಂಬುದನ್ನು ಗಮನಿಸಿದ್ದೆ. ಆ ನಿರೀಕ್ಷೆಯನ್ನು ಉಳಿಸಿಕೊಂಡು ಹೋಗಬೇಕು ಎಂದು ಹುಡುಕಾಟದಲ್ಲಿದ್ದ ಸಮಯದಲ್ಲಿಯೇ ಈ ಹೊಸ ಸಿನಿಮಾ ಕಥೆ ನನ್ನ ಮುಂದೆ ಬಂತು. ನನ್ನ ಕರಿಯರ್‌ನಲ್ಲಿ ಇದು ಒಳ್ಳೆಯ ಅವಕಾಶವಾಗುತ್ತದೆ ಎಂಬ ನಂಬಿಕೆ ಬಂತು.

ಸಾಕಷ್ಟು ಹಿರಿಯ ನಟರು ಬೇರೆ ಬೇರೆ ಗೆಟಪ್‌ಗಳಲ್ಲಿ, ಹಲವು ಶೇಡ್‌ಗಳಲ್ಲಿ ಪ್ರಯತ್ನಗಳನ್ನು ಮಾಡಿದ್ದಾರೆ. ನನಗೂ ಆ ರೀತಿ ಪ್ರಯತ್ನಗಳನ್ನು ಮಾಡಬೇಕು ಅನಿಸಿತ್ತು. ಅದಕ್ಕೆ ಪೂರಕವಾಗಿ ಈ ಕಥೆಯೂ ಇದ್ದದ್ದು ಬಲವಾದ ಅಂಶವಾಯಿತು.

◆ **'ಯುದ್ಧಕಾಂಡ 2' ಸಿನಿಮಾಗೆ ಒಟಿಟಿಯಲ್ಲಿ ಪ್ರತಿಕ್ರಿಯೆ ಹೇಗಿದೆ?**

ಒಟಿಟಿಯಲ್ಲಿ ಈಗ ಭಾರತದಲ್ಲೇ ಟಾಪ್ 10 ಟ್ರೆಂಡಿಂಗ್ ಸಿನಿಮಾದಲ್ಲಿ 'ಯುದ್ಧಕಾಂಡ 2' ಇದೆ. ಕನ್ನಡ ಹಾಗೂ ಹಿಂದಿಯಲ್ಲಿ ಹೆಚ್ಚು ಜನ ನೋಡುತ್ತಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಸ್ವಯಂ ಪ್ರೇರಿತರಾಗಿ ಕನ್ನಡ ಸಿನಿಮಾ ಎಂದೇ ಹೇಳಿ ಪ್ರಚಾರ ಮಾಡುತ್ತಿದ್ದಾರೆ.

◆ **'ಸರಳ ಸುಬ್ಬರಾವ್' ಸಿನಿಮಾ ಬಗ್ಗೆ ಹೇಳುವುದಾದರೆ?**

'ಸರಳ ಸುಬ್ಬರಾವ್' ರೆಟ್ರೊ ಶೈಲಿಯ ಸಿನಿಮಾ. ಹೊಸ ಪ್ರಯತ್ನ ಎನ್ನಬಹುದು. 'ಯುದ್ಧಕಾಂಡ 2' ಸಿನಿಮಾದಲ್ಲಿ ಒಂದು ಶೇಡ್ ಇದ್ದರೆ, ಈ ಸಿನಿಮಾದಲ್ಲಿ ಮತ್ತೊಂದು ಶೇಡ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ಅನಂತನಾಗ್ ಅವರು, ಅಣ್ಣಾವ್ರು ಆ ಸಮಯದಲ್ಲಿ ಹೇಗೆ ಕಾಣಿಸಿಕೊಳ್ಳುತ್ತಿದ್ದರೋ ಆ ರೀತಿಯಲ್ಲಿ ಕಾಣಿಸಿಕೊಂಡಿದ್ದೇನೆ.

◆ **ನಿಮ್ಮ ನಿರೀಕ್ಷೆಯ ಪಾತ್ರಗಳು ಸಿಗುತ್ತಿವೆಯೇ?**

ಕಲಾವಿದರಿಗೆ ಪಾತ್ರಗಳ ವಿಷಯದಲ್ಲಿ ಆಸೆ ಹೆಚ್ಚು. ಎಲ್ಲ ರೀತಿಯ ಪಾತ್ರಗಳ ಮೇಲೂ ಸಮನಾದ ವ್ಯಾಮೋಹ ಇರುತ್ತದೆ. ಹಾಗೇ ನನಗೂ ಒಂದಲ್ಲ, ಎರಡಲ್ಲ, ಹಲವು ರೀತಿಯ ಪಾತ್ರಗಳನ್ನು ಮಾಡಬೇಕೆಂಬ ಆಲೋಚನೆ ಇದೆ. ಕಾಕತಾಳೀಯವಾಗಿ ಕಥೆ, ನಿರ್ದೇಶಕರು, ನಿರ್ಮಾಪಕರು ಸಿಕ್ಕರೆ ಅದೃಷ್ಟ.

ಈ ವಿಷಯದಲ್ಲಿ ನಾನು ಭಾಗ್ಯವಂತ ಅಂದುಕೊಂಡಿದ್ದೇನೆ. ಎಲ್ಲ ರೀತಿಯ ಶೇಡ್‌ಗಳಲ್ಲಿ ನನಗೆ ಅವಕಾಶ ಬರುತ್ತಿರುವುದು, ಬರಹಗಾರರು ನನ್ನನ್ನು ಗಮನದಲ್ಲಿಟ್ಟುಕೊಂಡು ಪಾತ್ರ, ಕಥೆ ಬರೆಯುವುದು, ಈ ಪಾತ್ರ ನಿರ್ವಹಿಸಬಲ್ಲ ಎಂಬ ನಂಬಿಕೆ ಇಟ್ಟುಕೊಂಡಿರುವುದಕ್ಕೆ ನಾನು ಧನ್ಯ.

◆ **ನಿಮ್ಮ ಮುಂದಿನ ಪ್ರಾಜೆಕ್ಟ್‌ಗಳು...**

'ಸರಳ ಸುಬ್ಬರಾವ್' ಸಿನಿಮಾ ಬಿಡುಗಡೆಗೆ ಸಿದ್ಧವಾಗುತ್ತಿದೆ. ಇನ್ನೊಂದು ಸಿನಿಮಾ ಚಿತ್ರೀಕರಣ ಮುಗಿದಿದೆ. ಅದಕ್ಕೆ ಟೈಟಲ್ ಘೋಷಣೆಯಾಗಬೇಕಿದೆ. ಈಚೆಗೆ ಮತ್ತೊಂದು ಸಿನಿಮಾ ಕೂಡ ಘೋಷಣೆಯಾಯಿತು. ಅದಕ್ಕೂ ಟೈಟಲ್ ಫಿಕ್ಸ್ ಆಗಿಲ್ಲ. ಈಗ ಒಟಿಟಿಯಲ್ಲಿ ಭಾಷೆಯನ್ನು ಮೀರಿ ಸಿನಿಮಾ ನೋಡುತ್ತಿರುವುದರಿಂದ ಎಲ್ಲರಿಗೂ ಅನ್ವಯವಾಗುವಂಥ, ಅರ್ಥವಾಗುವಂಥ ಶೀರ್ಷಿಕೆಯನ್ನೂ ಇಡಬೇಕಾಗುತ್ತದೆ. ಆ ಒಂದು ನಿಟ್ಟಿನಲ್ಲಿ ಯೋಚಿಸುತ್ತಿದ್ದೇವೆ.

◆ **ನಿರ್ದೇಶನದಲ್ಲಿ ತೊಡಗಿಕೊಂಡಿರುವ ಕುರಿತು...**

ನಿರ್ದೇಶನ ನನ್ನ ಬಹುದಿನಗಳ ಕನಸು. ಇನ್ನೂ ಪೂರ್ಣಪ್ರಮಾಣಕ್ಕೆ ಬರಲು ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಬರವಣಿಗೆ ಕೆಲಸ ನಡೆಯುತ್ತಿದೆ. ನಾನೇ ಬರೆಯುತ್ತಿದ್ದೇನೆ. ■